Clause 1, Title, etc.

MR. DEPUTY SPEAKER.—The question is :

"That Clause 1, the Title, the Preamble and the Enacting Formula do stand part of the Bill."

The motion was adopted and Clause 1, the long Title, the Preamble and the Enacting Formula were added to the Bill.

Motion to Pass

SRI M. CHANDRASEKHAR.—Sir, I beg to move :

"That the Bangalore Water Supply and Sewerage (Amendment) Bill, 1983 be passed."

MR. DEPUTY SPEAKER.—The question is :

"That the Bangalore Water Supply and Sewerage (Amendment) Bill, 1983 be passed."

The motion was adopted and the Bill was passed

THE KARNATAKA AGRICULTURAL CREDIT OPERATIONS AND MISCELLANEOUS PROVISIONS (AMENDMENT) BILL 1984

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಾಂಸದಿಕ ವ್ಯವಹಾರ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ೧೯೮೪ನೇ ಇಸವಿಯ ಕರ್ನಾಟಕ ಕೃಷಿ ಸಾಲದ ಕಾರ್ಯಾಚರಣೆಯ ಹಾಗೂ ವ್ಯವಸಾಯದ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ತಿದ್ದುಪಡಿಯ ವಿಧೇಯಕವನ್ನು ಪರ್ಯಾಲೋಚಿಸ ಬೇಕು ಎಂದು ನಾನು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಗಿದೆ

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಉಪಾಧ್ಯಕ್ಷರೇ, ಇದು ವ್ಯವಸಾಯಗಾರರಿಗೆ ಅನುಕೂಲ ವಾಗಿರತಕ್ಕ ವಿಧೇಯಕ. ಸಾಲವನ್ನು ವ್ಯವಸಾಯಗಾರರು ತೆಗೆದುಕೊಳ್ಳುವುದರಲ್ಲಿ ಮತ್ತು ಸಾಲ ವನ್ನು ಮರುಪಾವತಿ ಮಾಡುವ ವಿಚಾರದಲ್ಲಿ ಕೆಲವು ಬದಲಾವಣೆಗಳು ಅತ್ಯಾವಶ್ಯಕವಾಗಿ ಬೇಕಾಗಿವೆ. ಇದರ ಬಗ್ಗೆ ಸರ್ಕಾರಕ್ಕೆ ಮನವಿಗಳು ಬಂದ ಕಾರಣ ಈ ತಿದ್ದುಪಡಿಯನ್ನು ಸೂಚನೆ ಮಾಡಬೇಕಾಗಿದೆ. ಮೊದಲನೆಯದಾಗಿ, to include the development of inland and marine fisheries in the definition of pisciculture. ಇದರ ಜೊತೆಗೆ To specify Regional Rural Banks established under the Regional Rural Banks Act also as credit agencies for the purpose of the Act ;

To make provisions of the Act applicable in respect of loans and advances granted prior to the commencement of the Act also.

Clause 3 : To provide for the creation of a mortgage by hypothecation also, and

Clause 4 : To provide for the issue and registration of a certificate of discharge on the agriculturists discharging their dues.

ಇಲ್ಲಿ ಷ್ಯೂರಿಟೀಸ್ ಮತ್ತು ಕೋಆಬ್ಲಿಗೆಂಟ್ಸ್‌ಗೂ ಕೂಡ ಲೀಗಲ್ ರೆಪ್ರಸೆಂಟೇಷನ್ ಮೂಲಕ ಸಾಲ ಕೊಡತಕ್ಕ ಜವಾಬ್ದಾರಿಯನ್ನೂ ಗೊತ್ತು ಮಾಡಲಾಗಿದೆ. ಮತ್ತೆ ಲಿಮಿಟೇಷನ್ ಪಿರಿಯಡ್‌ನ್ನು ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ಬ್ಯಾಂಕ್‌ನವರು ಸಾಲ ಕೊಡುವವರು ಈಗಿರತಕ್ಕ ಲಿಮಿಟೇಷನ್ ಸಾಲದು ಇದನ್ನು ಜಾಸ್ತಿ ಮಾಡಬೇಕು ಎಂದು ಮನವಿ ಮಾಡಿಕೊಂಡಿದ್ದರಿಂದ ಸಾಲವನ್ನು ಕೊಡುವವರಿಗೂ ಮತ್ತು ಸಾಲವನ್ನು ತೆಗೆದುಕೊಳ್ಳುವ ರೈತರಿಗೂ ಅನುಕೂಲವಾಗುವ ದೃಷ್ಟಿಯಲ್ಲಿ ಈ ವಿಧೇಯಕವನ್ನು ತರಲಾಗಿದೆ. ಮಾನ್ಯ ಸಭೆಯು ಇದಕ್ಕೆ ಒಪ್ಪಿಗೆಯನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೈ ರಾಮಕೃಷ್ಣ (ಆನೇಕಲ್).—ಮಾನ್ಯ ಉಪಾಧ್ಯಕ್ಷರೇ, ಈ ಮಸೂದೆ ರೈತರಿಗೆ ಉಪಯೋಗಕರವಾಗತಕ್ಕ ಮಸೂದೆ ಎಂದು ನಮ್ಮ ಕಾನೂನು ಮಂತ್ರಿಗಳು ಹೇಳಿದರು. ಅವರು ಕ್ಲಾಸ್–೪ರ ತನಕ ಓದಿ ಕ್ಲಾಸ್–೫ನ್ನು ಓದಲಿಲ್ಲ. ಅಷ್ಟಕ್ಕೆ ಬಿಟ್ಟು ಬಿಟ್ಟರು. ಕ್ಲಾಸ್–೫ರಲ್ಲಿ ಏನು ಹೇಳಿದ್ದಾರೆಂದರೆ, I would like to comment on Clause-5. It read as, 'to provide for the recovery of the dues as arrears of land revenue from the co-obligants and the sureties of the agriculturists and their legal representatives ಕೋರ್ಟಿಗೆ ಯಾವ ಅಧಿಕಾರವನ್ನು ಕೊಡಬೇಕೋ ಅದನ್ನು ನೀವು ಅಧಿಕಾರಿಗಳಿಗೆ ಕೊಡುವುದಕ್ಕೆ ಹೊರಟಿದ್ದೀರಿ. ಲ್ಯಾಂಡ್ ರಿವಾರಂಸ್ ಆರಿಯರ್ಸ್ ತರಹ ಇದನ್ನೂ ಅಧಿಕಾರಿಗಳು ವಸೂಲು ಮಾಡಬೇಕು ಎಂದು ಹೇಳಿದ್ದೀರಿ. ಇದು ನ್ಯಾಯವೇ? ಇವತ್ತು ಸಾಲವನ್ನು ತೆಗೆದುಕೊಂಡವರು ವಾಪಸ್ ಹಣ ಕೊಡಲಿಕ್ಕಾಗಲಿಲ್ಲ ಎಂದು ಇಟ್ಟುಕೊಳ್ಳಿ. ಕಾನೂನು ಪ್ರಕಾರ ದಾವ ಹಾಕಬೇಕು. ಸ್ಥಿರಾಸ್ತಿಯನ್ನು ಹರಾಜು ಮಾಡಿ ರಿಕವರಿ ಮಾಡಬೇಕು. ಈಗ ತಂದಿರತಕ್ಕ ತಿದ್ದುಪಡಿಯ ಪ್ರಕಾರ ಸ್ಯೂರಿಟಿಯ ಮತ್ತು ಕೋ–ಆಬ್ಲಿಗೆಂಟ್ಸ್ ಕಡೆಯಿಂದ ಇದನ್ನು ಲ್ಯಾಂಡ್ ರೆವಿನ್ಯೂ ಆರಿಯರ್ಸ್ ರೀತಿಯಲ್ಲಿ ವಸೂಲು ಮಾಡಬೇಕು ಎಂದು ಹೇಳುತ್ತಿದ್ದೀರಿ. ಇದು ವ್ಯವಸಾಯಗಾರರನ್ನು ಉದ್ಧಾರ ಮಾಡತಕ್ಕ ಕಾನೂನೇ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗಿದೆ. ಅದಕ್ಕೋಸ್ಕರ rethinking is definetly necessary specially on Clause-5. ಇದು ರೈತರಿಗೆ ವಿರೋಧವಾಗಿರತಕ್ಕ ಅಮೆಂಡ್‌ಮೆಂಟ್. ದಯವಿಟ್ಟು ಇದನ್ನು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಮಾಜಿ ಕಾನೂನು ಸಚಿವರು, ಸರಿಯಾಗಿ ತಾವು ಇತ್ತ ಕಡೆ ತಮ್ಮ ಗಮನವನ್ನು ಹರಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ಅವಸರದಿಂದ ತಮ್ಮ ಅಭಿಪ್ರಾಯವನ್ನು ಇದರ ಬಗ್ಗೆ ಕೊಡುವುದಕ್ಕೆ ಹೊರಟಿದ್ದೀರಿ. ಸಾಲ ಕೊಟ್ಟವರಿಗೆ ಅದನ್ನು ವಾಪಸ್ ತೆಗೆದುಕೊಳ್ಳುವ ಗ್ಯಾರಂಟಿ ಇಲ್ಲದೇ ಹೋದರೆ ಸಾಲವನ್ನು ಕೊಡುವುದಕ್ಕೆ ಯಾರು ಮುಂದೆ ಬರುತ್ತಾರೆ? ಈಗ ಇರತಕ್ಕ ಕಾನೂನು ಪ್ರಕಾರ ಅವಕಾಶ ಕಡಿಮೆ ಇರುವುದರಿಂದ ಇದನ್ನು ತರಲಾಗಿದೆ.

ಶ್ರೀ ವೈ ರಾಮಕೃಷ್ಣ.—ಯಾವರೀತಿ ಇದರಿಂದ ರೈತರಿಗೆ ಅನುಕೂಲವಾಗುತ್ತದೆ?

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಇದರಿಂದ ರೈತರಿಗೆ ತುಂಬಾ ಅನುಕೂಲವಾಗುತ್ತದೆ. ರಿಕವರಿ ಪ್ರೊಸೀಡಿಂಗ್ಸ್ ತೆಗೆದುಕೊಳ್ಳುತ್ತಾರೆ, ಹಣ ತೆಗೆದುಕೊಂಡವರು, ಕಂತಿನ ಮೂಲಕ ಕಟ್ಟಿದ್ದಾರೆಯೆ? ಬಡ್ಡಿ ಕಟ್ಟಿದ್ದಾರೆಯೆ? ಎಂಬುದನ್ನು ನೋಡಿಕೊಂಡು ಮಾಡುತ್ತಾರೆ. ದಾವಾ ಹಾಕಿ ವಸೂಲ್ಮಾಡತಕ್ಕ ಸಮಯದಲ್ಲಿ ಎಕ್ಸ್‌ಕ್ಲೂಡ್ ಮಾಡಬೇಕು. ರೀಜನಲ್ ಸೆಂಟ್ರಲ್ ಬ್ಯಾಂಕ್ ಕೇಂದ್ರ ಸರ್ಕಾರದ್ದು ಯಾವ ಕಾನೂನಿನಲ್ಲಿದೆ ಎನ್ನುವುದನ್ನು ಮಾಜಿ ಕಾನೂನು ಮಂತ್ರಿಗಳು ಹೇಳಬೇಕು. ಹಣ ಕೊಡುವವರು ನೂರಾರು ಕಾನೂನುಗಳನ್ನು ಹಾಕುತ್ತಾರೆ, ಹಣ ಕೊಟ್ಟವರಿಗೂ ಕೂಡ ವಸೂಲ್ಮಾಡುವುದಕ್ಕೆ ಅನ್ಯಾಯವಾಗಬಾರದೆನ್ನುವ ಕಾರಣಕ್ಕೋಸ್ಕರ ಮಾಡಿದ್ದೇವೆ. ಹಣ ತೆಗೆದುಕೊಂಡು ವಾಪಸ್ಸು ಕೊಡದೇ ಹೋದರೆ, ಬ್ಯಾಂಕುಗಳನ್ನು ಮುಚ್ಚಿಕೊಂಡು ಹೋಗಬೇಕಾಗುತ್ತದೆ.

ಶ್ರೀ ವೈ. ರಾಮಕೃಷ್ಣ.—ಹಣ ವಸೂಲು ಮಾಡುವುದು ಬಹಳ ಕಷ್ಟವಾಗುತ್ತದೆ ಲಿಮಿಟೇಷನ್ ಜಾಸ್ತಿ ಏತಕ್ಕೆ ಮಾಡುತ್ತೀರಿ?

SRI A. LAKSHMISAGAR.—It includes period taken in the proceedings for the purposes of ascertainment of the debt and even thereafter if arrears are not paid by the loanees for the purposes of claiming that money in a court of law the time taken in the proceedings would be excluded for the purposes of computation of the period of limitation is the point. It also ensures benefit to the loanee. He will get larger period.

MR. DEPUTY SPEAKER.—I will now put consideration motion to the vote of the House. The question is:

'That the Karnataka Agricultural Credit Operations and Miscellaneous Provisions (Amendment) Bill, 1984 be taken into consideration'.

The motion was adopted

CLAUSE BY CLAUSE CONSIDERATION

CLAUSES 2 to 7

MR. DEPUTY SPEAKER.—As there are no amendments I will now put Clauses 2 to 7 to the vote of the House. The question is:

'That Clauses 2 to 7 both inclusive do stand part of the Bill'.

The motion was adopted

and Clauses 2 to 7 both inclusive were added to the Bill.

CLAUSE 1 etc.,

MR. DEPUTY SPEAKER:—The question is:

'That Clause 1, title, preamble and the enacting formula do stand part of the bill'.

The motion was adopted

Clause 1, title, preamble and the enacting formula were added to the bill.

MOTION TO PASS

SRI A. LAKSHMISAGAR (Minister for law & Parliamentary affairs and Public Grievances).—Sir, I move:

'That the Karnataka Agricultural Credit Operations and Miscellaneous Provisions (Amendment) Bill, 1984 be passed'.

The motion was adopted and the bill was passed.

THE KARNATAKA PUBLIC LIBRARIES (AMENDMENT) BILL 1984

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ.ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ವಿದ್ಯಾ ಇಲಾಖೆಯ ಮಂತ್ರಿಗಳ ಪರವಾಗಿ ೧೯೮೪ನೇ ಇಸವಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

[ಪ್ರಸ್ತಾವನೆಯನ್ನು ಮಂಡಿಸಲಾಗಿದೆ]

ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬರೀ ನಾವು ಬದಲಾವಣೆ ಮಾತ್ರ ಇದೆ.

ಶ್ರೀ ವೈ. ರಾಮಕೃಷ್ಣ.—ತಾವು ಏತಕ್ಕೆ ಸುಮ್ಮ ಸುಮ್ಮನೆ ನಾವು ಬದಲಾವಣೆ ಮಾಡುತ್ತೀರಿ? ಇಷ್ಟು ವರ್ಷ ಹೇಗೆ ನಡೆದುಕೊಂಡು ಬಂದಿದೆಯೋ ಹಾಗೆ ಹೋಗಲಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ಒಂದು ಇದ್ದರೆ ಸಾಕು ಎಂದು ದೊಡ್ಡವರು ಹೇಳಿದ್ದಾರಲ್ಲ. ನಾವದ ಬಲವ್ದೊಂದು ಇದ್ದರೆ ಸಾಕು ಎಂದು ಕೂಡ ಹೇಳಿದ್ದಾರೆ. ಆಡಳಿತಾತ್ಮಕ ದೃಷ್ಟಿಯಿಂದ ಸ್ಟೇಟ್ ಲೈಬ್ರೇರಿಯನ್ ಎನ್ನುವುದನ್ನು ತೆಗೆದು ಡೈರೆಕ್ಟರ್ ಆಫ್ ಪಬ್ಲಿಕ್ ಲೈಬ್ರೇರೀಸ್ ಮಾಡಬೇಕೆಂದು ಇದನ್ನು ತರಲಾಗಿದೆ. ಆಡಳಿತಾತ್ಮಕ ಅನುಕೂಲಕ್ಕಾಗಿ ಬೇರೆ ರಾಜ್ಯಗಳಲ್ಲಿಯೂ ಮಾಡಿದ್ದಾರೆ. ಇದರಿಂದ ಲಾಭಾನೂ ಇಲ್ಲ, ನಷ್ಟಾನೂ ಇಲ್ಲ. ಇದರಿಂದ ಒಳ್ಳೆಯದಾಗುತ್ತದೆನ್ನುವ ಮನಸ್ಸು ಇದೆ. In the neighbouring States of Andhra pradesh Tamil Nadu and Maharashtra, also the Head of the Department of Libraries is called as Director of Public Libraries. The Karnataka Public Libraries Act, 1965 (Karnataka Act No. 10 of 1965) is, proposed to be amended for the above mentioned purpose. The bill is in order to bring uniformity and to deal with the matters in the neighbouring States which facilitates administratively. This is the point. I cannot enumerate the instances which would ensure to the benefit of the department administratively. But it will certainly help the department administratively.

ಶ್ರೀ ಭೀಮಣ್ಣ ಖಂಡ್ರೆ.—ಆಂಧ್ರ ಪ್ರದೇಶದಲ್ಲಿ ಡೆಪ್ಯೂಟಿ ಕಮೀಷನರ್‌ರವರನ್ನು ಕಲೆಕ್ಟರ್ ಎಂದು ಕರೆಯುತ್ತಾರೆ, ತಾವು ಹಾಗೆ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ನಿಮ್ಮ ಸಲಹೆಯನ್ನು ಯೋಚನೆ ಮಾಡಬಹುದು.

ಒಬ್ಬ ಮಾನ್ಯ ಸದಸ್ಯರು.—ರಾಜ್ಯ ಮಟ್ಟದಲ್ಲಿ ಡೈರೆಕ್ಟರ್ ಎಂದು ಕರೆದರೆ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ಅಧಿಕಾರಿಗಳನ್ನು ಕೂಡ ಅನುಕ್ರಮವಾಗಿ ಡೆಪ್ಯೂಟಿ ಡೈರೆಕ್ಟರ್, ಜಾಯಿಂಟ್ ಡೈರೆಕ್ಟರ್ ಎಂದು ಕರೆಯುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಈಗ ತಂದಿರುವ ತಿದ್ದುಪಡಿಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಯಾವ ಹೆಸರಿನಿಂದ ಕರೆಯುತ್ತೀರಿ ಎನ್ನುವುದು ತಿಳಿಸಿಲ್ಲ. ಮೇಲೆ ಬದಲಾವಣೆ ಮಾಡಿದ ಮೇಲೆ ಕೆಳಗೂ ಕೂಡ ಬದಲಾವಣೆ ಮಾಡಬೇಕಾಗುತ್ತದೆ. ಇದನ್ನು ವಾಪಸ್ಸು ತೆಗೆದುಕೊಂಡು ಒಂದೇ ಸಾರಿ ಮಸೂದೆಯನ್ನು ತನ್ನಿ.

ಶ್ರೀ ಎ. ಲಕ್ಷ್ಮೀಸಾಗರ್.—ತಮ್ಮ ಸಲಹೆಯೂ ಚೆನ್ನಾಗಿ ಇರುವ ಹಾಗೆ ಕಾಣುತ್ತೆ, ಪರಿಶೀಲನೆ ಮಾಡೋಣ.